ವಿಜಯವಾಣಿ

# ಮಾಫಿಯಾದಿಂದ ರಾಜಧಾನಿಗೆ ಕೆಟ್ಟ ಹೆಸರು

## ವಿಜ್ಞಾನಿ ಡಾ. ಟಿ.ವಿ.ರಾಮಚಂದ್ರ ಅಭಿಮತ | 'ನಮ್ಮ ಬೆಂಗಳೂರಿಗ' ಪ್ರಶಸ್ತಿ ಪ್ರದಾನ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ರಾಜಧಾನಿಯ ಭೂಮಿ, ನೀರು ಮತ್ತು ತ್ಯಾಜ್ಯದ ಮಾಫಿಯಾ ಹಿಡಿತದಲ್ಲಿರುವುದರಿಂದಲೇ ಗಾರ್ಬೇಜ್ ಸಿಟಿ, ಕಾಂಕ್ರೀಟ್ ಸಿಟಿ ಎಂಬ ಹೆಸರು ಬರುವಂತಾಗಿದೆ ಎಂದು ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ ಹೇಳಿದ್ದಾರೆ.

ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಮ್ಮ ಬೆಂಗಳೂರು ಫೌಂಡೇಷನ್ ವತಿಯಿಂದ ನೀಡಲಾದ 8ನೇ ಆವೃತ್ತಿಯ 'ನಮ್ಮ ಬೆಂಗಳೂರಿಗ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

**ಕೊಳವೆಬಾವಿ ಮೇಲೆ ಶೇ.40 ಬೆಂಗಳೂರಿಗರ ಅವಲಂಬನೆ**

**ಭೂಗಳ್ಳರ ದುರಾಸೆಗೆ ಕೆರೆಗಳು ನಾಶ**

ಬೆಂಗಳೂರಿನಲ್ಲಿನ ಶೇ. 40 ಜನರು ನೀರಿಗಾಗಿ ಕೊಳವೆಬಾವಿ ಅವಲಂಬಿಸಿದ್ದಾರೆ. ಆದರೆ, ಅಂತರ್ಜಲ ಬತ್ತಿ ತೀವ್ರ ನೀರಿನ ಸಮಸ್ಯೆ ಉಂಟಾಗಿದೆ. ನಾಡಪ್ರಭು ಕೆಂಪೇಗೌಡ ಈ ನಗರಿಯಲ್ಲಿ 1,500 ಕೆರೆಗಳನ್ನು ನಿರ್ಮಿಸಿದ್ದರು. ಭೂಗಳ್ಳರ ಹಪಾಹಪಿಗೆ ಅವೆಲ್ಲವೂ ನಾಶವಾಗಿವೆ. ಅದರ ಜತೆಗೆ ನೀರಿನ ಮತ್ತು ಕಸದ ಮಾಫಿಯಾ ಇಡೀ ಬೆಂಗಳೂರನ್ನೇ ಹಾಳು ಮಾಡಿವೆ. ಪರಿಸರ, ನೀರು ಕಲುಷಿತಗೊಂಡು ಜನರಲ್ಲಿ ಕ್ಯಾನ್ಸರ್, ಕಿಡ್ನಿ ಸಮಸ್ಯೆ ಹೆಚ್ಚುವಂತಾಗಿದೆ ಎಂದರು.

**ನಾನು ಹೆಮ್ಮೆಯ ಬೆಂಗಳೂರಿಗ:** ಕೋಲಾರ ಸೇರಿ ಇನ್ನಿತರ ಭಾಗಗಳಿಗೆ ನೀರು ಹರಿಸಲು ಎತ್ತಿನಹೊಳೆ ಯೋಜನೆ ಜಾರಿಗೆ ರಾಜ್ಯ ಸರ್ಕಾರ ಮುಂದಾಗಿದೆ. ಅದಕ್ಕಾಗಿ ನೇತ್ರಾವತಿ ನದಿಯಿಂದ 24 ಟಿಎಂಸಿ ನೀರು ತರುವುದಾಗಿ ಹೇಳಲಾಗಿದೆ. ಆದರೆ, ಅಲ್ಲಿರುವುದೇ 9.5 ಟಿಎಂಸಿ ನೀರು. ಹೀಗಿರುವಾಗ ಉಳಿದ 14.5 ಟಿಎಂಸಿ ನೀರು ಎಲ್ಲಿಂದ ಬರುತ್ತದೆ ಎಂಬುದೇ ಸರ್ಕಾರಕ್ಕೆ ತಿಳಿದಿಲ್ಲ. ಈ ಕುರಿತು ವರದಿ ಸಿದ್ಧಪಡಿಸಿದಾಗ ಸರ್ಕಾರ ನನ್ನ ತೇಜೋವಧೆ ಮಾಡಿತ್ತು. ನಾನು ಎಲ್ಲಿಯವನು ಎಂದು ಪ್ರಶ್ನಿಸಿತ್ತು. ಆದರೆ, ಈಗ ನಮ್ಮ ಬೆಂಗಳೂರಿಗ ಪ್ರಶಸ್ತಿ ದೊರೆತಿದ್ದರಿಂದ ನಾನು 'ಹೆಮ್ಮೆಯ ಬೆಂಗಳೂರಿಗ' ಎಂದು ಹೇಳಿಕೊಳ್ಳುತ್ತೇನೆ ಎಂದು ಟಿ.ವಿ. ರಾಮಚಂದ್ರ ಹೇಳಿದರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಾತನಾಡಿ, ನಾಗರಿಕರು ಸರ್ಕಾರದ ಜತೆಗೂಡಿ ಕೆಲಸ ಮಾಡಬೇಕು. ಎಲ್ಲದಕ್ಕೂ ಸರ್ಕಾರವನ್ನೇ ಬೇಡಬಾರದು. ಜನರು ತಮ್ಮ ಹಕ್ಕಿಗಾಗಿ, ಪರಿಸರ ಸಂರಕ್ಷಣೆಗಾಗಿ ಹೋರಾಡದಿದ್ದರೆ ಪ್ರಜಾಪ್ರಭುತ್ವ ಕುರುಡಾಗುತ್ತದೆ. ಬೆಂಗಳೂರಿನ ಈಗಿನ ಪರಿಸ್ಥಿತಿ ಸುಧಾರಿಸಲು ಮುಂದಿನ ಪೀಳಿಗೆಯವರಲ್ಲಿ ಪರಿಸರದ ಬಗ್ಗೆ ಜಾಗೃತಿ ಉಂಟು ಮಾಡಬೇಕು ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್, ವಿಧಾನ ಪರಿಷತ್ ಸದಸ್ಯೆ ತಾರಾ ಅನುರಾಧಾ, ಹಿರಿಯ ವಕೀಲ ಸಜ್ಜನ್ ಪೂವಯ್ಯ, ನಮ್ಮ ಬೆಂಗಳೂರು ಫೌಂಡೇಷನ್‌ನ ಸಿಇಒ ಶ್ರೀಧರ್ ಪಬ್ಬಿಶೆಟ್ಟಿ ಇನ್ನಿತರರಿದ್ದರು.



ನಮ್ಮ ಬೆಂಗಳೂರು ಫೌಂಡೇಷನ್ ಪುರಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ ಅವರಿಗೆ 'ನಮ್ಮ ಬೆಂಗಳೂರಿಗ' ಪ್ರಶಸ್ತಿ ಪ್ರದಾನ ಮಾಡಲಾಯಿತು.

> ರಾಜಧಾನಿಯ ಪ್ರತಿ ಕಟ್ಟಡದಲ್ಲೂ ಮಳೆನೀರು ಕೊಯ್ಲು ಅಳವಡಿಸಿದರೆ ಅಂತರ್ಜಲ ವೃದ್ಧಿಯಾಗಿ 15 ಟಿಎಂಸಿ ನೀರು ದೊರೆಯುತ್ತಿದೆ. ಜತೆಗೆ, ಕೆರೆಗಳನ್ನು ಅಭಿವೃದ್ಧಿಪಡಿಸಿದರೆ 16 ಟಿಎಂಸಿ ನೀರು ಸಿಗುತ್ತದೆ. ಈ ಕೆಲಸ ಸಾಕಾರಗೊಂಡಿದ್ದೇ ಆದರೆ, ಬೆಂಗಳೂರಿಗೆ ಬೇಕಾಗುವ ನೀರೆಲ್ಲವನ್ನೂ ಪಡೆದು, ಉಳಿದದ್ದನ್ನು ಬೇರೆ ಜಿಲ್ಲೆಗಳಿಗೆ ಸರಬರಾಜು ಮಾಡಬಹುದು! ಆದರೆ ಅದನ್ನು ಒಳ್ಳೆಯ ಕೆಲಸ ಮಾಡುವುದಕ್ಕೆ ಸರ್ಕಾರಕ್ಕೆ ಸಮಯ ಮತ್ತು ತಾಳ್ಮೆಯಿಲ್ಲ.
>
> | ಡಾ. ಟಿ.ವಿ. ರಾಮಚಂದ್ರ ವಿಜ್ಞಾನಿ

BSC ACADEMY
1st Block, Rajajinagara, Bangalore.
(More than 1 Lakh Placed In Bank & SSC)
Banking PO/Clerk [SBI & IBPS] RBI, SSC [CGL, & CHSL] NIACL & other competitive exams
9972552604, 8310188676

### ರಾಜ್ಯದಲ್ಲಿ ಪ್ರಶಸ್ತಿ ಪುರಸ್ಕೃತರು

**ನಮ್ಮ ಬೆಂಗಳೂರಿಗ:** ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ

**ವರ್ಷದ ವ್ಯಕ್ತಿ:** ಸ್ತ್ರೀ ಜಾಗೃತಿ ಸಮಿತಿ ಸಹ ಸಂಸ್ಥಾಪಕಿ ಗೀತಾ ಮೆನನ್

**ಸಾಮಾಜಿಕ ಉದ್ಯಮಿ:** 'ಬ್ಲ್ಯಾಂಕ್ ನಾಯ್ಸ್' ಸಂಸ್ಥಾಪಕ ಆಯೋಜಕಿ ಜಾಸ್ಮೀನ್ ಪತೇಜ

**ಯುವ ತಾರೆ:** ಲೆಟ್ಸ್ ಸ್ಪ್ರೆಡ್ ಲವ್ ಸಂಸ್ಥಾಪಕ ಹರ್ಷಿಲ್ ಮಿತ್ತಲ್

**ಸರ್ಕಾರಿ ಅಧಿಕಾರಿ:** ಬಿಬಿಎಂಪಿ ಕೆರೆ ವಿಭಾಗದ ಡಿಸಿಎಫ್ ಟಿ.ಜಗನ್ನಾಥರಾವ್

**ಮಾಧ್ಯಮ ವಿಭಾಗ:** ದಿ ನ್ಯೂಸ್ ಮಿನಿಟ್ ಸಂಪಾದಕಿ ಧನ್ಯಾ ರಾಜೇಂದ್ರನ್